ಕೈಯಲ್ಲಿ ರತ್ನಪಕ್ಷಿ.' ಚಾರುದತ್ತರು ಕೊಡಗಿನ ಕೈಲಾಸದ ತುದಿಯಲ್ಲಿ ನಿಂತುಕೊಂಡು ನಿಟ್ಟುಸಿರು ಬಿಡುತ್ತಾರೆ.

ಅಷ್ಟರಲ್ಲಿ ಮಳೆಯ ಒಂದೆರೆಡು ಹನಿಗಳು ನೆತ್ತಿಯ ಮೇಲೆ ಬೀಳುತ್ತವೆ. ನೋಡು ನೋಡುತ್ತಿದ್ದಂತೆ ಘಟ್ಟದ ಕೆಳಗಿಂದ ಅರಬಿ ಕಡಲಿನ ಕಡೆಯಿಂದ ಕೊಡಗಿನ ಮಲೆಶಿಖರಗಳಿಗೆ ಡಿಕ್ಕಿ ಹೊಡೆಯುತ್ತಾ ಕಪ್ಪಗಿನ ಮೋಡಗಳು ಮೇಲೆ ಹತ್ತಿ ಬರುತ್ತಿರುವುದು ಅಲ್ಲಿಂದಲೇ ಕಾಣಿಸುತ್ತದೆ.

'ಓ ಕಾಫಿಯ ಮಳೆ' ಚಾರುದತ್ತವರ ಮುಖ ಅರಳುತ್ತದೆ.

'ಏ ಸೌಭಾಗ್ಯಾ, ಬೇಗ ಜೀಪು ತೆಗೆದುಕೊಂಡು ಹೊರಡು, ನಾನೂ ಬರುತ್ತೇನೆ' ಚಾರುದತ್ತರು ಸೊಸೆ ಸೌಭಾಗ್ಯಳಿಗೆ ಫೋನಿನಲ್ಲೇ ಆದೇಶಗಳನ್ನು ನೀಡಲು ಶುರುಮಾಡುತ್ತಾರೆ.

'ಆಳುಗಳಿಗೆ ನೀರಿನ ಮೋಟರ್ ಆಫ್ ಮಾಡಲು ಹೇಳು.'

'ಸ್ಪ್ರಿಂಕ್ಲರಿನ ನೀರು ಬಂದು ಮಾಡಲು ಹೇಳು.'

'ಒಣಗಿಸಲು ಹರಡಿದ ಕರಿಮೆಣಸು ಒಳಗೆ ಇಡಿಸು.'

'ನೀನೂ ಬೇಗ ಹೊರಡು, ನಾನೂ ರೆಡಿ.'

ಚಾರುದತ್ತರು ಪ್ರಕೃತಿಯನ್ನೂ, ಕಾಮವನ್ನೂ, ಸೌಂದರ್ಯವನ್ನೂ ಎಲ್ಲವನ್ನೂ ಮರೆತು ಪಕ್ಕಾ ಕಾಫೀ ಬೆಳೆಗಾರರಂತೆ ಕಾಫಿಯ ಮಳೆಯ ಮಣ್ಣಿನ ಪರಿಮಳದಲ್ಲಿ ಕಳೆದುಹೋಗುತ್ತಾರೆ.

ಅದು ಚಾರುದತ್ತರನ್ನೂ, ವಿಲಾಸಿನಿಯನ್ನೂ ನಾನು ಕೊನೆಯ ಸಲ ನೋಡಿದ್ದ ದಿನ. ಕೊಡಗಿನಿಂದ ವರ್ಗಗೊಂಡು ದ್ವೀಪಕ್ಕೆ ಹೊರಟಿದ್ದ ನನಗೆ ಅವರಿಬ್ಬರು ನೀಡಿದ್ದ ಬೀಳ್ಕೊಡುಗೆಯ ದಿನ ಅದು. ಹಿಮದರ್ಶನದ ಗೇಟಿನವರೆಗೂ ನನ್ನ ತೋಳು ಹಿಡಿದು ನಡೆದ ಚಾರುದತ್ತರು ಸೊಸೆ ಓಡಿಸುತ್ತಿದ್ದ ಜೀಪಿನ ಮುಂದಿನ ಸೀಟಿನಲ್ಲಿ ಕುಳಿತರು. ಅಲ್ಲಿಂದಲೇ ನನಗೆ ಸಣ್ಣಗೆ ಕಣ್ಣುಹೊಡೆದು, 'ಸಾಹೇಬರೇ ಸಿಗುವಾ' ಎಂದು ಟಾಟಾ ಹೇಳಿದ್ದರು.

★★★

ಚಾರುದತ್ತರ ತಂದೆ ಗಣಪಯ್ಯ ಜೋಯಿಸರು ಆ ಕಾಲದಲ್ಲೇ, ಅಂದರೆ ಕೊಡಗನ್ನು ಬ್ರಿಟಿಷರು ಆಳುತ್ತಿದ್ದ ಕಾಲದಲ್ಲೇ ಹುಲಿಮೀಸೆ ಬಿಟ್ಟವರು.

'ಬ್ರಾಹ್ಮಣರಲ್ಲಿ ಹುಲಿಮೀಸೆ ಬಿಟ್ಟ ಮೊದಲ ಮಾಣಿ ನನ್ನ ಅಪ್ಪಯ್ಯ' ಎಂದು ಚಾರುದತ್ತರು ಜಂಬಕೊಚ್ಚಿಕೊಳ್ಳುತ್ತಿದ್ದರು.

ಆದರೆ, ಅಂತಹ ಹುಲಿಮೀಸೆ ಅಪ್ಪಯ್ಯ, ಸಾಯುವಾಗ ತನ್ನನ್ನು ಸುಡಲು ಅಂತ ಇಟ್ಟಿದ್ದ ರಕ್ತಚಂದನದ ಒಣಗಿದ ಗೆಲ್ಲುಗಳನ್ನು ಮಗ ಚಾರುದತ್ತರು ಆಳುಗಳಿಂದ ಸರಿಸಿ, ದೂರ ಇಡಿಸಿ ಮಾಮೂಲು ಮರದ ಸೌದೆಯಲ್ಲೇ ಅಪ್ಪಯ್ಯನನ್ನು ಅಗ್ನಿಗೆ ಅರ್ಪಿಸಿದ್ದರು.

'ನನ್ನ ತಾಯಿಯನ್ನು ಹೊಡೆದು ಕೊಂದವನು ಇವನು. ಇವನನ್ನು ಸುಡಲು ರಕ್ತಚಂದನವೇಕೆ' ಎಂಬುದು ಚಾರುದತ್ತರ ವಾದ.

ಅವರ ತಾಯಿ ರುಕ್ಮಿಣಿಯಮ್ಮ ಬಹಳ ಸುಂದರಿಯಾದ ಹೆಂಗಸಾಗಿತ್ತಂತೆ. ರುಕ್ಮಿಣಿಯಮ್ಮ ಮಲಯಾಳ ದೇಶದ ಕಡೆಯಿಂದ ಬಂದವರು. ಆಗಿನ ಕಾಲದಲ್ಲಿ ಮಲಯಾಳ ದೇಶದಲ್ಲಿ ಮದುವೆಯಾಗದ ನಂಬೂದರಿ ಕನ್ಯಾಸ್ತ್ರೀಯರನ್ನು ಕಣ್ಣಿಗೆ ಬಟ್ಟೆಕಟ್ಟಿ ಕಾಡಿಗೆ ಬಿಡುತ್ತಿದ್ದರಂತೆ. ಹಾಗೆ ಕೊಡಗಿನ ಕಾಡಿಗೆ ಬಿದ್ದ ಆ ಮಲಯಾಳಿ ಹೆಂಗಸು ಕೊಡಗಿನ ಕಾನನಗಳಲ್ಲಿ ಹುಲಿ ಕಾಡುಕೋಣ ಜಿಗಣೆಗಳ ನಡುವೆ ಹಲವು ಹಗಲು ರಾತ್ರಿಗಳನ್ನು ಕಳೆದು, ಭಾಗಮಂಡಲದ ಬಳಿಯ ಕೋಪಟ್ಟಿ ಮಲೆ ಇಳಿದು ಕೆಳಗೆ ಬಂದಾಗ ಬೇಟೆಗೆ ಹೋಗಿದ್ದ ಕೊಡಗಿನ ಜನ ಆ ಸ್ತ್ರೀ ಸೌಂದರ್ಯವನ್ನು ನೋಡಿದರಂತೆ.